ಓ ಎಸ್ ನಂ. 24/2015

ಡಿ ಡಬ್ಲ್ಯು 5

ದಿನಾಂಕ 10/04/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ 10 ನೇ ಪ್ರತಿವಾದಿ ಪರಃ ಶ್ರೀ ಕೆ ಎಂ ಎಸ್ ವಕೀಲರಿಂದಃ

ದಿನಾಂಕ 13/11/2021 ರ ಮೂಲ ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ-93 ಎಂದು, ಋಣಭಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ-94 ಎಂದು, ಎಂ ಆರ್ ಆದೇಶದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-95 ಎಂದು, ಸರ್ವೆ ನಂ.69/2 ರ 6 ಕೈ ಬರಹದ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-96 ರಿಂದ 101, ಒಂದು ಕಂಪ್ಯೂಟರೀಕೃತ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-102 ಎಂದು, ಎಂ ಆರ್ ಆದೇಶದ ಪ್ರತಿಯನ್ನು 65-ಬಿ ಸರ್ಟಿಪಿಕೇಟ್ ನ ಜತೆ ಹಾಜರುಪಡಿಸಿದ್ದು ಎಂ ಆರ್ ಆದೇಶದ ಪ್ರತಿಯನ್ನು ನಿಡಿ-103 ಮತ್ತು 65-ಬಿ ಸರ್ಟಿಪಿಕೇಟನ್ನು ನಿಡಿ-103(ಎ) ಎಂದು, 23/08/2006 ರ ನೊಂದಾಯಿತ ವಿಭಾಗ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-104 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಪಿ ಆರ್ ಸಿ ವಕೀಲರಿಂದಃ

ಸರ್ವೆ ನಂ.**69/3** ರ ಸ್ವತ್ತನ್ನು ನನ್ನ ಮಗಳು ಅನಿತಾರವರಿಗೆ ದಾನ ಪತ್ರ ಮಾಡಿದ್ದೀರಾ ಎಂದರೆ ಸರಿ. ಸದರಿ ದಾನಪತ್ರವನ್ನು ದಿನಾಂಕ **25/08/2025** ರಂದು ಮಾಡಿರುತ್ತೇನೆ ಎಂದರೆ ಸರಿ. ಆಗಾಗಿ ಸದರಿ ಸರ್ವೆ ನಂಬರಿನ ಮೇಲೆ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸಾಕ್ಷಿ ನನ್ನ ಮಗಳಿಗೆ

ಮಾಡಿಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ನನಗೆ ಯಾವುದೇ ರೀತಿಯ ಕಾನೂನು ರೀತಿಯ ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.